# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 35/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಭಾಸ್ಕರ | ಫ್ರಾಸಾಃ | 11 |
| **ತಂದೆಯ ಹೆಸರುಃ** | ವೆಂಕಟರವಣರೆಡ್ಡಿ | ಚಾಸಾಃ | 13 |
| **ವಯಸ್ಸುಃ** | 30 | ಪ್ರಮಾಣ ವಚನ ಭೋದಿಸಿದ ದಿನಾಂಕ: | 20-09-2025 |
| **ಉದ್ಯೋಗಃ** | ಖಾಸಗಿ | | |
| **ವಾಸ ಸ್ಥಳಃ** | ವೈಗೊಲ್ಲಹಳ್ಳಿ | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಿಪಿ-*5* ರಲ್ಲಿರುವ ಸಹಿ ನನ್ನದೇ*.* ಅದನ್ನು ನಿಪಿ-*5(*ಬಿ*)* ಎಂದು ಗುರುತಿಸಲಾಯಿತು*. 3* ವರ್ಷದ ಹಿಂದೆ ಪರ್ಲಹಳ್ಳಿ ಪೋಲಿಸ್ ಠಾಣೆಯಲ್ಲಿ ಸದರಿ ಸಹಿ ಮಾಡಿದ್ದೇನೆ*.* ನಾನು ಠಾಣೆಯ ಮುಂದೆ ಹೋಗುತ್ತಿದ್ದಾಗ ಪೋಲಿಸರು ನನ್ನನು ಠಾಣೆಗೆ ಕರೆದಿದ್ದು ಚಾಸಾ-*7* ರವರು ಕೂಡ ಅಲ್ಲಿದ್ದು ಒಂದು ರಕ್ತವಾಗಿದ್ದ ಶರ್ಟ ನ್ನು ಹಾಜರುಪಡಿಸಿ ಅದು ಗಾಯಾಳುವಿನ ಶರ್ಟ್ ಎಂದು ತಿಳಿಸಿದ್ದು , ಈ ಸಂಬಂಧ ಪೋಲಿಸರು ಮಹಜರ್ ಜರುಗಿಸಿ ಬಟ್ಟೆ ಅಮಾನತ್ತು ಪಡಿಸಿಕೊಂಡರು*.* ಸದರಿ ಶರ್ಟ್ ಈಗ ನೋಡುತ್ತಿದ್ದು ಮು*.*ಮಾ*.05* ಎಂದು ಈಗಾಗಲೇ ಗುರುತಿಸಲಾಗಿದೆ*.* ನನ್ನ ಜೊತೆ ಚಾಸಾ-*7* ಮತ್ತು ಚಾಸಾ-*14* ಕೂಡ ಸಹಿ ಮಾಡಿದ್ದಾರೆ*.*

**<u>ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ.ಎಂ.ಎಸ್.ಸಿ ವಕೀಲರಿಂದ ಪಾಟೀ ಸವಾಲು</u>**

ಆ ಬಣ್ಣದ ಶರ್ಟ್ ಗಳು ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸರಿ. ನನಗೆ ಪೋಲಿಸ್ ನೋಟಿಸ್ ನೀಡಿರಲಿಲ್ಲ. ನಾನು ಗೊಲ್ಲಹಳ್ಳಿಯವನು ಎಂದು ಪೋಲಿಸರಿಗೆ ತಿಳಿದಿತ್ತು. ಮು.ಮಾ.05 ಚೌಡರೆಡ್ಡಿಯ ಶರ್ಟ್ ಅಲ್ಲ ಈ ಕೇಸಿಗಾಗಿ ಅದನ್ನು ಸೃಷ್ಠಿ ಮಾಡಲಾಗಿದೆ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆಂರದೆ ಸರಿಯಲ್ಲ.

**<u>ಉಳಿದ ಆರೋಪಿ ಪರ ವಕೀಲರು ಗೈರು ಹಾಜರು ಹೀಗಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ20.09.2025 **(ಕೆ.ಎಂ.ರಾಜಶೇಖರ)**

ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.